ತೆಗೆದು ಈ ನೇರಕ್ಕೆ ಇಟ್ಟುಕೊಳ್ಳಬೇಕಾ? ದಯವಿಟ್ಟು, ಇಂಥ ಅಜ್ಞಾನ ಮೌಢ್ಯತೆ ವಿಷಯದ ಚರ್ಚೆ ಯಾರೂ ಮಾಡಬಾರದೆಂದು ಒಂದು ರೆಸಲ್ಯೂಷನ್ ಮಾಡಿ.

**ಅಧ್ಯಕ್ಷರು :** ಕ್ಲೋಸ್ ಕ್ಲೋಸ್, ಬಿಡ್ರಿ, ಮುಂದಿನದನ್ನು ತೆಗೆದುಕೊಳ್ಳಿ.

**4. ನಿಯಮ 60ರ ಮೇರೆಗೆ ಚರ್ಚೆಗೆ ಅನುಮತಿ ಕೋರಿಕೆ**

**ವಿಷಯ : ರಾಜ್ಯದಲ್ಲಿ ತೀವ್ರತರವಾದ ಬರಗಾಲವಿದ್ದು, ತೆಂಗು ಬೆಳೆ ಸಂಪೂರ್ಣ ನಾಶವಾಗಿದ್ದು, ಆದರಿಂದ ತೆಂಗು ಉತ್ಪನ್ನ ಪಾತಳಕ್ಕೆ ಹೋಗಿ ರೈತರು ಸಂಕಷ್ಟಕ್ಕೆ ಒಳಗಾಗಿ ಸರ್ಕಾರ ಸ್ಪಂದಿಸದಿರುವ ಬಗ್ಗೆ.**

**ಶ್ರೀ ಕೆ.ಎಂ.ತಿವಲಿಂಗೇಗೌಡ (ಅರಸೀಕೆರೆ) :** ಮಾನ್ಯ ಅಧ್ಯಕ್ಷರೆ, ಈ ತೀವ್ರವಾದ ಬರಗಾಲದಲ್ಲಿ, ಏನು ತೆಂಗು ಬೆಳೆಯುವ ಪ್ರದೇಶದಲ್ಲಿ, ಬಹಳಷ್ಟು ತೆಂಗುಗಳು ಸುಳಿ ಎಲ್ಲಾ ಕಳಚಿ ಬಿದ್ದು ಲಕ್ಷಾಂತರ ಮರಗಳು ಸರ್ವನಾಶವಾಗಿ ಹೋಗಿವೆ. ನನ್ನ ಕ್ಷೇತ್ರ ಒಂದರಲ್ಲೇ ಸುಮಾರು 1 ಲಕ್ಷಕ್ಕೂ ಅಧಿಕವಾಗಿ ಮರಗಳು ಬಿದ್ದಿರುವ ಮಾಹಿತಿಯನ್ನು ತಮ್ಮ ಅವಗಾಹನೆಗೆ ದಾಖಲೆ ಸಮೇತ ತರುತ್ತಿದ್ದೇನೆ. ಲಕ್ಷ ಮರಗಳನ್ನು ತರುವುದಕ್ಕಾಗುವುದಿಲ್ಲ, ಎಷ್ಟು ತರಬೇಕೋ ಅಷ್ಟನ್ನು ತಂದಿದ್ದೇನೆ, ಹೋಗಿ ನೋಡಿ ಲಕ್ಷ ಮರಗಳು ಸಿಗುತ್ತವೆ. ನಮಗೆ ತೆಂಗು ಬಹಳ ಪ್ರಮುಖವಾಗಿರುವ ಬೆಳೆ. "ಕಾಮಧೇನು, ಕಲ್ಪವೃಕ್ಷ" ಎನ್ನುವ ರೀತಿಯಲ್ಲಿ ಈ ತೆಂಗನ್ನು ಬಿಟ್ಟು ಬೇರೆ ಬೆಳೆಯನ್ನು, ನಮ್ಮ 7-8 ಜಿಲ್ಲೆಗಳಾದ ತಿಪಟೂರು, ಅರಸೀಕೆರೆ, ಚನ್ನರಾಯಪಟ್ಟಣ.....

**ಅಧ್ಯಕ್ಷರು :** ಈಗ ವಿವರವಾದ ಚರ್ಚೆ ಮಾಡುವುದು ಬೇಡ.

**ಶ್ರೀ ಕೆ.ಎಂ.ತಿವಲಿಂಗೇಗೌಡ :** ನಿಯಮ 60ರಡಿಯಲ್ಲಿ ನೀವು ಅಕ್ಸೆಪ್ಟ್ ಮಾಡಬೇಕಲ್ಲ? ನಿಯಮ 60ರ ಅಡಿಯಲ್ಲಿ ನಾನು ಏತಕ್ಕೋಸ್ಕರ ತರುತ್ತಿದ್ದೇನೆ, ಯಾವ ಉದ್ದೇಶವಿದೆ ಎನ್ನುವ ಮಾಹಿತಿಯನ್ನು ತಮ್ಮ ಗಮನಕ್ಕೆ ತರಬೇಕಲ್ಲಾ? ಅದಕ್ಕೆ ನಿಯಮ 60ರ ಅಡಿಯಲ್ಲಿ ಇದನ್ನೆಲ್ಲಾ ಸವಿಸ್ತಾರವಾಗಿ ಹೇಳುತ್ತಿದ್ದೇನೆ.

**ಶ್ರೀ ಟಿ.ಬಿ.ಜಯಚಂದ್ರ [ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು] :** ಈಗ ತಂದಿರುವ ವಿಚಾರ, ರಾಜ್ಯದಲ್ಲಿ ತೀವ್ರತರವಾದ ಬರಗಾಲವಿದ್ದು, ತೆಂಗು ಬೆಳೆ ಸಂಪೂರ್ಣ ನಾಶವಾಗಿದ್ದು, ಅದರಿಂದ ತೆಂಗು ಉತ್ಪನ್ನ ಪಾತಳಕ್ಕೆ ಹೋಗಿ ಸಂಕಷ್ಟಕ್ಕೆ ಒಳಗಾಗಿರುವ ರೈತರ ಬಗ್ಗೆ ಸ್ಪಂದಿಸದಿರುವ ಬಗ್ಗೆ, ನಿಜ, ನಾನು ಒಪ್ಪುತ್ತೇನೆ, ನಾನೂ ಕೂಡ ಇವತ್ತು ತೆಂಗು ಬೆಳೆಗಾರರ ಪ್ರದೇಶದಿಂದ ಬಂದಿರುವವನು, ಅದರ ಅನುಭವವಿದೆ. ಈ ಬಗ್ಗೆ

ಶಿವಲಿಂಗೇಗೌಡರಿಗೆ ಒಂದು ಸಲಹೆ ಕೊಡುವುದೇನೆಂದರೆ, ನೀವು ಇದನ್ನು ನಿಯಮ 60ರ ಅಡಿಯಲ್ಲಿ ತಂದಿರುವುದೇನೋ ಸರಿ. ಆದರೆ ಈಗ ವಿಶೇಷವಾಗಿ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಇನ್ನು ಆರಂಭವೇ ಆಗಿಲ್ಲ, ದಯಮಾಡಿ ಆಗ ಮಾತನಾಡುವ ಸಂದರ್ಭದಲ್ಲಿ ತಾವು ಈ ವಿಚಾರವನ್ನು ಪ್ರಸ್ತಾಪ ಮಾಡಬಹುದು. ರೈತರಿಗೆ ಅದು ಶಾಶ್ವತ ಬೆಳೆ ಹಾಳಾಗಿರುವ ಸಂದರ್ಭದಲ್ಲಿ ರಾಜ್ಯಪಾಲರ ಭಾಷಣದ ಮೇಲೆ ಪ್ರಸ್ತಾಪ ಮಾಡುವುದು ಸೂಕ್ತವಾಗುತ್ತದೆ. ನಿಮ್ಮ ಉದ್ದೇಶವನ್ನು ನಾನು ಪ್ರಶ್ನೆ ಮಾಡುತ್ತಿಲ್ಲ.

ರಾಜ್ಯಪಾಲರ ಭಾಷಣದ ಸಂದರ್ಭದಲ್ಲಿ ಪ್ರಸ್ತಾಪ ಮಾಡಿ. ರಾಜ್ಯಪಾಲರ ಭಾಷಣಕ್ಕೆ ಆದ್ಯತೆ ಕೊಡಿ.

**ಅಧ್ಯಕ್ಷರು** : ಅವರು ಮಾತನಾಡುತ್ತಿದ್ದಾರೆ ಕುಳಿತುಕೊಳ್ಳಿ ಜಯಚಂದ್ರರವರೇ ಸಂಕ್ಷಿಪ್ತವಾಗಿ ಹೇಳಿ.

**ಶ್ರೀ ಟಿ.ಬಿ.ಜಯಚಂದ್ರ** : ರಾಜ್ಯಪಾಲರ ಭಾಷಣದಲ್ಲಿ ಈ ಎಲ್ಲಾ ವಿಷಯಗಳನ್ನು ಚರ್ಚೆ ಮಾಡಬಹುದು. ದಯಮಾಡಿ ಆದ್ಯತೆ ಬೇಕು ಎನ್ನುವುದಾದರೆ ನಿಯಮ 69ರ ಅಡಿಯಲ್ಲಿ convert ಮಾಡುವುದಕ್ಕೆ ನಮ್ಮ ಅಭ್ಯಂತರವಿಲ್ಲ.

**ಶ್ರೀ ಕೆ.ಎಂ.ಶಿವಲಿಂಗೇಗೌಡ** : ನೀವೇ ಅಧ್ಯಕ್ಷರಿಗೆ ಹೇಳಿ ಕೊಡುತ್ತಿದ್ದೀರಲ್ಲ.

**ಶ್ರೀ ಟಿ.ಬಿ.ಜಯಚಂದ್ರ** : ಸರ್ಕಾರದ ನಿಲುವು ನಾನು ಹೇಳಿದೆ.

**ಶ್ರೀ ಕೆ.ಎಂ.ಶಿವಲಿಂಗೇಗೌಡ** : ಸರ್ಕಾರದ ನಿಲುವು ಇದ್ದರೆ ನೀವು ತೆಂಗು ಬೆಳೆಗಾರರ ಪ್ರದೇಶದಿಂದ ಬಂದು . . .

**ಅಧ್ಯಕ್ಷರು** : ಅದನ್ನೆಲ್ಲಾ ಹೇಳಬೇಡಿ. ವಿಷಯಕ್ಕೆ ಬನ್ನಿ.

**ಶ್ರೀ ಕೆ.ಎಂ.ಶಿವಲಿಂಗೇಗೌಡ** : ಮಾನ್ಯ ಅಧ್ಯಕ್ಷರೆ, ಈ ವಿಚಾರ ಬಹಳ ಗಂಭೀರವಾಗಿದೆ.

**ಅಧ್ಯಕ್ಷರು** : ಹೌದು, ಅದಕ್ಕಾಗಿಯೇ ನಿಮಗೆ ಅವಕಾಶ ಕೊಟ್ಟಿರುವುದು.

**ಶ್ರೀ ಕೆ.ಎಂ.ಶಿವಲಿಂಗೇಗೌಡ** : ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ. ನಮ್ಮಲ್ಲಿ ಇವತ್ತು ಏನಾಗಿದೆ ಎಂದರೆ, ಒಂದು ಕಡೆ ಮಳೆ ಇಲ್ಲದೆ ತೆಂಗಿನ ಸುಳಿಗಳು ಕಳಚಿ ಬಿದ್ದು ಹೋಗಿವೆ. ಒಂದು ಮಗುವನ್ನು ನಾವು ಯಾವ ರೀತಿ ಸಾಕುತ್ತೇವೆಯೋ ಆ ರೀತಿ ಎಂಟು ವರ್ಷಗಳಿಂದ ತೆಂಗಿನ ಗಿಡಗಳನ್ನು ಸಾಕಿರುತ್ತೇವೆ. ಆ ಸುಳಿ ಇವತ್ತು ಬಿದ್ದು ಹೋಗಿದೆ ಎಂದರೆ ನಮ್ಮ ಪಾಡೇನು? ಜೀವನದ ಸಮಸ್ಯೆ ಏನು ಎನ್ನುವುದು ಇಲ್ಲಿ ಬಹಳ ಅರ್ಥಗರ್ಭಿತವಾಗಿದೆ. ಈ ವಿಚಾರವನ್ನು ನಾವು ತಿಳಿದುಕೊಳ್ಳಬೇಕು. ಅದರ ಜೊತೆಯಲ್ಲಿ ಇವತ್ತಿನ ತೆಂಗಿನ

ಬೆಳೆ 50% ಬಂದಿದೆ, ಮೊದಲು ಒಂದು ಸಾವಿರ ತೆಂಗಿನ ಕಾಯಿಗೆ ಕೊಬ್ಬರಿ ತೂಕ 150 ಕೆ.ಜಿ. ಬರುತ್ತಿತ್ತು. ಇವತ್ತು 70 ಕೆ.ಜಿ. 80. ಕೆ.ಜಿ. 100 ಕೆ.ಜಿ. ಒಳಗಡೆ ಬರುತ್ತಿದೆ. ಅದನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋದರೆ, ಒಂದು ಕಾಲದಲ್ಲಿ ಮಾರುಕಟ್ಟೆ ದರ 9,000 ರೂ. ಇತ್ತು. ಇವತ್ತು 4,400 ರೂಪಾಯಿಗಳಿಗೆ ಕೇಳುವವರು ಇಲ್ಲ. 4,400 ರೂಪಾಯಿಗೆ ಕೊಬ್ಬರಿಯನ್ನು ಕೇಳುವವರೇ ಇಲ್ಲದೆ ಇರುವಂತಹ ಈ ಸಂದರ್ಭದಲ್ಲಿ ಸರ್ಕಾರ ಮಧ್ಯಪ್ರವೇಶ ಮಾಡಿ ರೈತರಿಗೆ ನ್ಯಾಯವನ್ನು ದೊರಕಿಸಿಕೊಡಬೇಕಾದ ಔಚಿತ್ಯತೆ ಇದೆಯೇ, ಇಲ್ಲವೇ ಎನ್ನುವುದು ಈ ಸದನದಲ್ಲಿ ತೀರ್ಮಾನ ಆಗಬೇಕಾಗಿದೆ. ಅದಕ್ಕೋಸ್ಕರ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಅದರಿಂದ ಬರತಕ್ಕಂತಹ ಉತ್ಪನ್ನಗಳು ಎಲ್ಲವೂ ಬೆಲೆ ಕಡಿಮೆ ಆಗಿ ಆಗಿರತಕ್ಕಂತಹ ಆಘಾತ, 8–10 ಜಿಲ್ಲೆಗಳಲ್ಲಿ ಅಲ್ಲಿಯ ರೈತರ ಜೀವನದ ವೈಖರಿ ನೋಡಿದರೆ ಗೊತ್ತಾಗುತ್ತದೆ. ಇವತ್ತು ಕೊಬ್ಬರಿ ಬೆಲೆ 5,000 ರಿಂದ 6,000 ರೂ.ವರೆಗೆ ಇರುತ್ತದೆ. ಕೊಬ್ಬರಿ ಮಂಡಳಿಯಲ್ಲಿ ನಾವು ಎಲ್ಲರೂ ಸಾಲಗಾರರು. ಇನ್ನು ಎಲ್ಲಿಯೂ ನಮಗೆ ಸಾಲ ಕೊಡುವವರು ಇಲ್ಲ. ತಿಪಟೂರು, ಅರಸೀಕೆರೆ ಹಾಗೂ ಚನ್ನರಾಯಪಟ್ಟಣಗಳ ಕೊಬ್ಬರಿ ಮಂಡಳಿಗಳಿಗೆ ಹೋಗಬೇಕು. ಸಾಲ ತೆಗೆದುಕೊಂಡಿರುವಂತಹ ಸಂದರ್ಭದಲ್ಲಿ ಎಷ್ಟೋ ಸಾರಿ ಅವರು ತೆಗೆದುಕೊಂಡಿರುವ ಸಾಲದ ಬಡ್ಡಿಗೆ ಕೊಬ್ಬರಿಯನ್ನು ಬಿಟ್ಟು ಸಾಲವನ್ನು ತೀರಿಸುವ ಪರಿಸ್ಥಿತಿ ನಾವು ನಿರ್ಮಾಣ ಮಾಡಿಕೊಂಡಿರುವ ಪರಿಸ್ಥಿತಿಯಲ್ಲಿ ದಯಮಾಡಿ ಇದಕ್ಕೆ ಹೆಚ್ಚಿನ ರೀತಿಯ ಒತ್ತನ್ನು ಕೊಡಬೇಕು. ಅದಕ್ಕೋಸ್ಕರ ನಿಯಮ 60 ಅಡಿಯಲ್ಲಿ ಈ ಪ್ರಸ್ತಾವನೆಯನ್ನು ತೆಗೆದುಕೊಂಡು ಈ ರಾಜ್ಯದ ತೆಂಗು ಬೆಳೆಗಾರರಿಗೆ ಮೋಕ್ಷವನ್ನು ದೊರಕಿಸಿಕೊಡಬೇಕು. ಅವರ ಜೀವನದ ಹಾದಿಯನ್ನು ಸುಗಮ ಮಾಡಿ ಕೊಡಬೇಕು ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಅಧ್ಯಕ್ಷರು** : ಮಾನ್ಯ ಸಚಿವರು ಈಗಾಗಲೇ ಹೇಳಿದ್ದಾರೆ. ಇದು ಪ್ರಮುಖವಾದ ವಿಷಯ. ಅದರಲ್ಲಿ ಏನೂ ಭಿನ್ನಾಭಿಪ್ರಾಯ ಇಲ್ಲ. ಇದನ್ನು ನಿಯಮ 69 ರ ಅಡಿಯಲ್ಲಿ ನಾಳೆ ಚರ್ಚೆಗೆ ತೆಗೆದುಕೊಳ್ಳೋಣ.

**ಶ್ರೀ ಕೆ.ಎಂ.ಶಿವಲಿಂಗೇಗೌಡ** : ನಾಳೆ ಬದಲು ಇಂದೇ ಅವಕಾಶ ಕೊಟ್ಟಿದರೆ ಚರ್ಚೆ ಮಾಡಬಹುದಾಗಿತ್ತು.

**ಅಧ್ಯಕ್ಷರು** : ಖಂಡಿತ ಅವಕಾಶ ಮಾಡಿಕೊಡುತ್ತೇನೆ. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಪ್ರಾರಂಭವಾಗಿಲ್ಲ. ಪ್ರಾರಂಭ ಮಾಡೋಣ. ನಿಮಗೆ ಅವಕಾಶ ಕೊಡುತ್ತೇನೆ. ನೀವು ಚರ್ಚೆ ಮಾಡಿ ಏನೂ ತೊಂದರೆ ಇಲ್ಲ.

**ಅಧ್ಯಕ್ಷರು :** ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ ಮಾನ್ಯ ಬಸವರಾಜ ರಾಯರೆಡ್ಡಿಯವರು.

**ಶ್ರೀ ಸಿ.ಟಿ. ರವಿ :** ಮಾನ್ಯ ಅಧ್ಯಕ್ಷರೆ, ಅರಣ್ಯ ಒತ್ತುವರಿ ನೆಪದಲ್ಲಿ ಖಿಲ್ಲಾ ಮಾಡುವುದಕ್ಕೆ ನಾಳೆಗೇ ನೋಟಿಸ್ ಇಷ್ಟ ಮಾಡಿದ್ದಾರೆ. ಬಹುತೇಕ ಜಿಲ್ಲೆಗಳಿಗೆ ಸಂಬಂಧಿಸಿದ ವಿಷಯ ಇದು. ನಮ್ಮ ಬದುಕಿನ ಪ್ರಶ್ನೆ ಇದೆ ಇಲ್ಲಿ. ಇದು ಶೂನ್ಯ ವೇಳೆ ಅಲ್ಲದೇ ಇದ್ದರೆ ಬೇರೆ ಯಾವುದಕ್ಕಾದರೂ convert ಮಾಡಿ ಚರ್ಚೆಗೆ ಅವಕಾಶ ಮಾಡಿ ಕೊಡಿ. ಈಗಾಗಲೇ ನೋಟಿಸ್ ಸರ್ವ್ ಆಗಿ ಬಿಟ್ಟಿದೆ.

**ಅಧ್ಯಕ್ಷರು :** ಖಂಡಿತ ಅವಕಾಶ ಕೊಡುತ್ತೇನೆ.

(ಗೊಂದಲ)

**ಶ್ರೀ ಬಿ.ಎಸ್.ಯಡಿಯೂರಪ್ಪ :** ಮಾನ್ಯ ಅಧ್ಯಕ್ಷರೆ, ನಿಮ್ಮ ಕೊಠಡಿಯಲ್ಲಿ ಇದರ ಬಗ್ಗೆ ಪ್ರಸ್ತಾಪವಾಯಿತು. ಈ ವಿಷಯ ನಿಮಗೂ ನಮಗೂ ಎಲ್ಲರಿಗೂ ಸಂಬಂಧಪಟ್ಟಿರುವಂಥದ್ದು. ಅರಣ್ಯ ಇಲಾಖೆಯವರು ಒಂದು ಸಾರಿ ನೋಟಿಸ್ ಕೊಡುವುದಕ್ಕೆ ಪ್ರಾರಂಭ ಮಾಡಿದರೆ, ಆ ರೈತರು ಬೀದಿ ಪಾಲಾಗುತ್ತಾರೆ. ನಾವು ಅಸೆಂಬ್ಲಿ ಮುಗಿಸಿಕೊಂಡು ವಾಪಸ್ ನಮ್ಮ ಕ್ಷೇತ್ರಗಳಿಗೆ ಹೋಗುವು–ದಕ್ಕಾಗುವುದಿಲ್ಲ. ದಯಮಾಡಿ ಆ ನೋಟಿಸ್ ಕೊಡುವುದನ್ನು ನಿಲ್ಲಿಸಿ. ಆಮೇಲೆ ಕಾನೂನಿನಂತೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಮಾಡುವಿರಂತೆ. ದಯವಿಟ್ಟು ನೀವು directions ಕೊಡಿ. ಇವತ್ತಿನಿಂದ ಆ ನೋಟಿಸ್ ಕೊಡುವುದನ್ನು ನಿಲ್ಲಿಸಿ. ಅಷ್ಟಾದರೂ ಮಾಡಿ. ಆ ಮೇಲೆ ನಿಧಾನವಾಗಿ ಕಾನೂನು ಚೌಕಟ್ಟಿನಲ್ಲಿ ಏನು ಬರುತ್ತದೋ ಆ ಕ್ರಮವನ್ನು ತೆಗೆದುಕೊಳ್ಳಿ.

**ಅಧ್ಯಕ್ಷರು :** ಮಾನ್ಯ ಯಡಿಯೂರಪ್ಪನವರೇ ಒಂದು ನಿಮಿಷ ಇರಿ, ನಾನು ಹೇಳುತ್ತೇನೆ. ಮಧ್ಯಾಹ್ನದ ಮೇಲೆ ನೀವು ಹೇಳಿದ ಹಾಗೆ ಎರಡು – ಮೂರು ವಿಚಾರಗಳು ಇವೆ. ಮಾನ್ಯ ಕಾರಜೋಳರವರು ಒಂದು ವಿಚಾರವನ್ನು ಕೊಟ್ಟಿದ್ದಾರೆ.

**ಶ್ರೀ ಗೋವಿಂದ ಎಂ. ಕಾರಜೋಳ :** ನಮ್ಮ ಸಮಸ್ಯೆ ಬೇರೆ, ಅವರ ಸಮಸ್ಯೆ ಬೇರೆ.

**ಅಧ್ಯಕ್ಷರು :** ರವಿ ಅವರದು ಒಂದು ಪ್ರಶ್ನೆ ಇದೆ.

**ಶ್ರೀ ಗೋವಿಂದ ಎಂ. ಕಾರಜೋಳ :** ಬಡವರು 40–50 ವರ್ಷಗಳಿಂದ ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ. ಅವರೆನ್ನೆಲ್ಲಾ ಈಗ ತೆರವುಗೊಳಿಸುತ್ತಿದ್ದಾರೆ. ಅವರಿಗೆ ನೋಟಿಸ್ ಕೊಟ್ಟಿದ್ದಾರೆ. ಜನ ಬೀದಿ ಪಾಲಾಗಿದ್ದಾರೆ.

**ಅಧ್ಯಕ್ಷರು** : ನೀವು ಎತ್ತಿದಂತಹ ಪ್ರಶ್ನೆಗಳು ಪ್ರಮುಖವಾದ ವಿಷಯಗಳು. ಇವತ್ತೇ ಚರ್ಚೆ ಪ್ರಾರಂಭ ಮಾಡೋಣ.

**ಶ್ರೀ ಬಿ.ಎಸ್.ಯಡಿಯೂರಪ್ಪ** : ಡೈರೆಕ್ಷನ್ ಕೊಟ್ಟು ನೋಟಿಸ್ ಕೊಡುವುದನ್ನು ನಿಲ್ಲಿಸಿ. ನೋಟಿಸ್ ಕೊಡುವುದು ನಿಲ್ಲಿಸಿ ಆ ಮೇಲೆ ನೀವು ಏನು ಬೇಕಾದರೂ ಮಾಡಿ.

**ಶ್ರೀ ಜಗದೀಶ್ ಶೆಟ್ಟರ್** : ರಾಜ್ಯಪಾಲರ ಭಾಷಣದಲ್ಲಿ ಇವರು ಹೇಳುತ್ತಾರೆ. ಬಾಲಸುಬ್ರಹ್ಮಣಿಯನ್‌ರವರ ಸಮಿತಿ, ಇನ್ನೊಂದು ರಾಮಸ್ವಾಮಿ ಸಮಿತಿ ಇದೆ. ಆ ಪ್ರಕಾರ ಮತ್ತೊಂದು ಹೊಸ ಸಮಿತಿ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಮಾಡುತ್ತೇವೆಂದು ಹೇಳುತ್ತೀರಿ. ಅದನ್ನು ಪರಿಶೀಲನೆ ಮಾಡುತ್ತೇವೆಂದು ಒಂದು ಕಡೆ ಹೇಳುತ್ತೀರಿ. ಈ ಕಡೆ ಮತ್ತೆ ನೋಟಿಸ್ ಕೊಡುತ್ತಾರೆ. ಇಂಥ ತಾರೀಖಿಗೆ ನೀವು ಹಾಜರಾಗಬೇಕು, ಇಲ್ಲಿಂದ ನೀವು ಹೊರಗಡೆ ಹೋಗಬೇಕು, ಈ ರೀತಿ ನೋಟಿಸ್ ಕೊಡುತ್ತಿದ್ದಾರೆ.

**ಅಧ್ಯಕ್ಷರು** : ಮಾನ್ಯ ಜಗದೀಶ್ ಶೆಟ್ಟರ್‌ರವರೇ, ನಾನು ಇಲ್ಲಿ ಕೂತಿದ್ದೇನೆ. ಕೆಲವು ವಿಚಾರಗಳು ಹೇಳುವುದಕ್ಕಾಗುವುದಿಲ್ಲ. ಇದರ ಬಗ್ಗೆ ಚರ್ಚೆ ಮಾಡೋಣ. ಇದರ ಬಗ್ಗೆ ತೀರ್ಮಾನ ಮಾಡಲೇಬೇಕು. ಬೇರೆ ಮಾರ್ಗ ಇಲ್ಲ. ನಿಮಗೆ ಅವಕಾಶ ಕೊಡೋಣ. ಖಂಡಿತ ಅವಕಾಶ ಕೊಡುತ್ತೇನೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ** : ಮಾನ್ಯ ಅಧ್ಯಕ್ಷರೆ, ತಾವೂ ನಮ್ಮ ಜಿಲ್ಲೆಯ ಹೋರಾಟಕ್ಕೂ ಬಂದಿದ್ದಿರಿ. ತಮಗೆ ಗೊತ್ತಿದೆ. ನಿಮ್ಮ ರಕ್ಷಣೆಗೆ ನಾವು ಬದ್ಧ ಎನ್ನುವ ಮಾತು ಹೇಳಿದಿರಿ.

**ಅಧ್ಯಕ್ಷರು** : ಹೌದು.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ** :– ಈ ಸಂದರ್ಭದಲ್ಲಿ ನೀವು ಅವರಿಗೆ ಸೂಚನೆ ಕೊಡಬೇಕು. ಈ ತಕ್ಷಣ ಅಲ್ಲಿ ಯಾವುದೇ ಕಾರ್ಯಚರಣೆ ಮಾಡದೆ ಇರುವ ರೀತಿಯಲ್ಲಿ ಸೂಚನೆ ಕೊಡಿಸಿ. ಒಂದು ನಿಮಿಷ ನಿಮಿಷಕ್ಕೂ ಅವರು ಆತಂಕಗೊಂಡಿದ್ದಾರೆ.

**ಅಧ್ಯಕ್ಷರು** : ಚರ್ಚೆಯ ಸಂದರ್ಭದಲ್ಲಿ ರೈತರಿಗೆ ರಕ್ಷಣೆ ಕೊಡುವಂತಹ ಆದೇಶವನ್ನು ಸರ್ಕಾರ ನೀಡುವ ಬಗ್ಗೆ ನಾನು ಅವರಿಗೆ ಸೂಚನೆ ನೀಡುತ್ತೇನೆ. ದಯವಿಟ್ಟು ಚರ್ಚೆ ಮಾಡೋಣ.

**ಶ್ರೀ ಜಗದೀಶ್ ಶೆಟ್ಟರ್** : ಮೂರು ಗಂಟೆಗೆ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡಿ.

**ಅಧ್ಯಕ್ಷರು** : ಖಂಡಿತ.

**ಶ್ರೀ ಗೋವಿಂದ ಎಂ. ಕಾರಜೋಳ** : ಅರಣ್ಯ ತೆರವುಗೊಳಿಸುತ್ತಿದ್ದಾರೆ.

**ಅಧ್ಯಕ್ಷರು** : ನನಗೆ ಗೊತ್ತಿದೆ.

**ಶ್ರೀ ಗೋವಿಂದ ಎಂ. ಕಾರಜೋಳ** : ಅವರದು ರೈತರ ಸಮಸ್ಯೆ, ನಮ್ಮದು ಬಡವರ ಸಮಸ್ಯೆ.

**ಅಧ್ಯಕ್ಷರು** : ನಿಮ್ಮ ಜೊತೆಗೆ ನಾನೂ ಇದ್ದೇನೆ. ಚರ್ಚೆ ಮಾಡಿ ಪರಿಹಾರ ಕಂಡುಕೊಳ್ಳೋಣ.

**ಶ್ರೀ ಸಿ.ಟಿ. ರವಿ** : ಮಾನ್ಯ ಅಧ್ಯಕ್ಷರೆ, ವಿಷಯ ಗಂಭೀರವಾಗಿದೆ. ಈಗಾಗಲೇ ಮೂಡಿಗೆರೆ ತಾಲ್ಲೂಕಿನಲ್ಲಿ ಬೆಳಗೊಳದಲ್ಲಿ ಅನಧಿಕೃತ ಸಾಗುವಳಿ ಮಾಡುತ್ತಿದ್ದಾರೆ ಎಂದು ಅವರನ್ನು ವೆಕೇಟ್ ಮಾಡಿಸಿದ್ದಾರೆ.

**ಅಧ್ಯಕ್ಷರು** : ಅಷ್ಟೂ ವಿಷಯಗಳನ್ನು ಪ್ರಸ್ತಾಪ ಮಾಡಿ ಅದಕ್ಕೆ ಸರಿಯಾದ ಪರಿಹಾರವನ್ನು ಸರ್ಕಾರದಿಂದ ಕಂಡುಕೊಳ್ಳೋಣ.

**ಶ್ರೀ ಸಿ.ಟಿ. ರವಿ** : ಉಳಿದವರಿಗೆಲ್ಲಾ ನಾಳೆ ಬೆಳಿಗ್ಗೆ ತೆರವುಗೊಳಿಸಿ ಎಂದು ನೋಟಿಸ್ ಕೊಟ್ಟಿದ್ದಾರೆ.

**ಅಧ್ಯಕ್ಷರು** : ನಾನು ಇಲ್ಲಿ ಕೆಲವು ವಿಚಾರಗಳನ್ನು ಹೇಳುವ ಹಾಗೆ ಇಲ್ಲ. ಮಾನ್ಯ ರಾಯರೆಡ್ಡಿಯವರೇ, ದಯಮಾಡಿ ಪ್ರಾರಂಭ ಮಾಡಿ.

## 5. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲೆ ಚರ್ಚೆ

**ಶ್ರೀ ಬಸವರಾಜ ರಾಯರೆಡ್ಡಿ(ಯಲಬುರ್ಗಾ)** : ಮಾನ್ಯ ಅಧ್ಯಕ್ಷರೆ, ಘನತೆವೆತ್ತ ರಾಜ್ಯಪಾಲರು ಜೂನ್ 3ನೇ ತಾರೀಖಿನಂದು ವಿಧಾನ ಮಂಡಲದ ಉಭಯ ಸದನಗಳ ಸದಸ್ಯರನ್ನು ಉದ್ದೇಶಿಸಿ ಮಾತನಾಡಿದ್ದಾರೆ. ಅದರ ಸಲುವಾಗಿ ವಂದನಾ ನಿರ್ಣಯವನ್ನು ಈಗಾಗಲೇ ನಾನು ಸೂಚಿಸಿದ್ದೇನೆ. ತಾವು ಅದರ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ನಾನು ವೈಯಕ್ತಿಕವಾಗಿ ಅತ್ಯಂತ ಆಭಾರಿಯಾಗಿದ್ದೇನೆ. ಮಾನ್ಯ ಅಧ್ಯಕ್ಷರೆ, ಇವತ್ತು ಕರ್ನಾಟಕದ ಜನ 2013ರ ಮೇ ತಿಂಗಳಲ್ಲಿ ನಡೆದ ಒಂದು ಚುನಾವಣೆಯಲ್ಲಿ ಹೊಸ ಆಶೋತ್ತರಗಳನ್ನು ಹಾಗೂ ಬಹಳಷ್ಟು ಅಭಿವೃದ್ಧಿ ವಿಚಾರಗಳನ್ನು ಗಮನದಲ್ಲಿ ಇಟ್ಟುಕೊಂಡು ಒಂದು ಪ್ರಾಮಾಣಿಕ ಹಾಗೂ ಜನಪರವಾದ ಸರ್ಕಾರ ಕೊಡುತ್ತಾರೆಂದು ಜನ ಇವತ್ತು ಕಾಂಗ್ರೆಸ್ ಪಕ್ಷಕ್ಕೆ ಹೆಚ್ಚಿನ ಬಹುಮತ ಕೊಟ್ಟು ಆಯ್ಕೆ ಮಾಡಿದ್ದಾರೆ. ಅದಕ್ಕೆ ನಾನು ಈ ಸಂದರ್ಭದಲ್ಲಿ ಜನತೆಯನ್ನು ತಮ್ಮ ಮುಖಾಂತರ ಅಭಿನಂದಿಸುತ್ತೇನೆ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ಯಾರಾ ನಂ. 4 ರಲ್ಲಿ ಭ್ರಷ್ಟಾಚಾರದ ಬಗ್ಗೆ ಕೆಲವು ಆತಂಕಗಳನ್ನು ವ್ಯಕ್ತಪಡಿಸಿ-ದ್ದಾರೆ. ಕರ್ನಾಟಕ ರಾಜ್ಯದಲ್ಲಿ ಭ್ರಷ್ಟಾಚಾರ ಇತ್ತೀಚಿನ ವರ್ಷಗಳಲ್ಲಿ